**ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**

**ಸಿ ಸಿ ನಂ. 991/2024**

| | | |
|---|---|---|
| ಹೆಸರು | ಬಸವರಾಜಪ್ಪ | PW –1 |
| ತಂದೆ ಹೆಸರು | ಮುಷ್ಟೂರಪ್ಪ | CW –1 |
| ವಯಸ್ಸು | 52 ವರ್ಷ | |
| ಉದ್ಯೋಗ | ಕೆ ಎಸ್ ಆರ್ ಟಿ ಸಿ ಚಾಲಕ | ದಿನಾಂಕಃ 27.11.2024 |
| ವಾಸ | ದಾವಣಗೆರೆ | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ಚಾಸಾ.2, 3 ಮತ್ತು 8 ರವರ ಪರಿಚಯವಿದೆ. ಚಾಸಾ.9 ರಿಂದ 12 ರವರ ಪರಿಚಯವಿದೆ. ನಾನು ಮತ್ತು ಚಾಸಾ.8 ರವರು ಕರ್ತವ್ಯ ನಿರ್ವಹಿಸುತ್ತಿದ್ದ ಕೆ ಎಸ್ ಆರ್ ಟಿ ಸಿ ಬಸ್ ನಂ. ಕೆಎ/17/ಎಫ್/1918 ನೆದ್ದರಲ್ಲಿ ನಾನು ಚಾಲಕನಾಗಿದ್ದು, ಚಾಸಾ.8 ರವರು ನಿರ್ವಾಹಕರಾಗಿದ್ದರು. ದಿನಾಂಕ 20.01.2024 ರಂದು ಮಧ್ಯಾಹ್ನ 2.00 ಗಂಟೆ ಸುವಾರಿಗೆ ಹರಿಹರದ ಕಡೆಯಿಂದ ಶಿವಮೊಗ್ಗ ಕಡೆಗೆ ಹೋಗುತ್ತಿದ್ದು, ಹರಿಹರ ಬೈಪಾಸ್ ನಿಂದ ಬೈಕ್ ನಂ. ಕೆಎ/17/ಇಕೆ/5370 ನೇ ನಂಬರಿನ ಬೈಕ್ ನಮ್ಮ ಬಸ್ಸ ಗೆ ಅಡ್ಡಲಾಗಿ, ಮುಂದೆ ಹೋಗಲು ಹಾರನ್ ಹಾಕಿದರು ಸಹ ನಮಗೆ ಮುಂದೆ ಹೋಗಲು ಬಿಡದೆ ದಾರಿಯೂ ಕೊಡದೆ ಬೆಳ್ಳೂಡಿ ಕ್ರಾಸ್ ವರೆಗೆ ಹೋದಾಗ, ನಮ್ಮ ಬಸ್ ಗೆ ಅಡ್ಡಲಾಗಿ ಬೈಕ್ ನ್ನು ನಿಲ್ಲಿಸಿದರು. ನಂತರ 1 ನೇ ಆರೋಪಿಯು ನಮ್ಮ ಬಸ್ ನ ಹತ್ತಿರ ಬಂದು ನನ್ನ ಬಲಗಡೆ ಇರುವ ಬಾಗಿಲನ್ನು ತೆಗೆದು, ನನ್ನ ಅಂಗಿಯನ್ನು ಹಿಡಿದು ಹೊರಗಡೆ ಎಳೆಯಲು ಪ್ರಯತ್ನಿಸಿದರು. ನಂತರ ನಿಮಗೆ ನಾನು ದಾರಿ ಕೊಡಬೇಕು, ಹಾರನ್ ಏಕೆ ಹಾಕುತ್ತಿಯಾ ಎಂದು ಹೇಳಿ ಅವಾಚ್ಯ ಶಬ್ದಗಳಿಂದ ಬೈದರು. ನನ್ನ ಜೊತೆ ಇದ್ದ ನಿರ್ವಾಹಕರಾದ ಚಾಸಾ.8 ರವರಿಗೂ ಸಹ 1 ನೇ ಆರೋಪಿ ಮತ್ತು ಇನ್ನೊಬ್ಬ ವ್ಯಕ್ತಿ ದುಡಾಡಿದರು. ನಂತರ ಅಲ್ಲಿ ಸಾಕಷ್ಟು ಸಾರ್ವಜನಿಕರು ಸೇರಿದರು. ಅವರೆಲ್ಲರೂ ಬಂದು ಜಗಳವನ್ನು ಬಿಡಿಸಲು ಪ್ರಯತ್ನಿಸಿದರು. ನಂತರ ಅಲ್ಲಿ ಪೋಲಿಸರು ಸ್ಥಳಕ್ಕೆ ಬಂದು, ಜಗಳವನ್ನು ಬಿಡಿಸಿ, ನನಗೆ ಮತ್ತು ಚಾಸಾ.8 ರವರಿಗೆ ಗಾಯವಾಗಿದ್ದನ್ನು ನೋಡಿ, ಹರಿಹರ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿದರು. ಸದರಿ ಗಲಾಟೆಯಲ್ಲಿ ನನಗೆ ಕೈ, ಕಾಲುಗಳಿಗೆ ಒಳಪೆಟ್ಟುಗಳಾಗಿದ್ದು, ಚಾಸಾ.8 ರವರಿಗೆ ತರಚಿದಗಾಯಗಳು ಆಗಿದ್ದವು.

ನಂತರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಹರಿಹರ ಪೋಲಿಸ್ ಠಾಣೆಗೆ ಹೋದಾಗ, ನಮ್ಮ ಇಲಾಖೆಯ ಮೇಲಾಧಿಕಾರಿಯವರಿಂದ ಪೋಲಿಸ್ ಠಾಣೆಗೆ ಮಾಹಿತಿ ಹೋಗಿದ್ದು, ನಂತರ ನಾನು ದೂರನ್ನು ಸಲ್ಲಿಸಿರುತ್ತೇನೆ. ಸದರಿ ದೂರನ್ನು ನಿಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ನಂತರ ಮಾರನೇ ದಿನ ದಿನಾಂಕ 21.01.2024 ರಂದು ಪೋಲಿಸರು ಕೃತ್ಯ ನಡೆದ ಸ್ಥಳಕ್ಕೆ ಬಂದು ಚಾಸಾ.2 ಮತ್ತು 3 ರವರ ಸಮಕ್ಷಮ ಬೆಳಗ್ಗೆ 9.00 ರಿಂದ 10. 00 ಗಂಟೆ ವರೆಗೆ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆ ಕಾಲಕ್ಕೆ ಆರೋಪಿತರು ಹರಿದು ಹಾಕಿದ ಶರ್ಟ್‌ನ್ನು ವಶಪಡಿಸಿಕೊಂಡಿರುತ್ತಾರೆ. ಮತ್ತು ಆ ಕಾಲಕ್ಕೆ ಕಚ್ಚಾ ನಕಾಶೆಯನ್ನು ತಯಾರಿಸಿ, ಮೂರು ಛಾಯಾಚಿತ್ರವನ್ನು ತೆಗೆದಿರುತ್ತಾರೆ ಸದರಿ ಪಂಚನಾಮೆಯನ್ನು ನಿಪಿ.2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಸದರಿ ಕಚ್ಚಾ

ನಕಾಶೆಯನ್ನು ನಿಪಿ.3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆಯಲಾದ ಸದರಿ ಛಾಯಚಿತ್ರವನ್ನು ನಿಪಿ4 ರಿಂದ 6 ಎಂದು ಗುರುತಿಸಲಾಯಿತು. ಸಾಕ್ಷಿಯು ಸದರಿ ಛಾಯಚಿತ್ರಗಳಲ್ಲಿ ತಾನು ಇರುವುದಾಗಿ ನೋಡಿ ಒಪ್ಪಿಕೊಂಡಿರುತ್ತಾರೆ. ಸದರಿ ವಶಪಡಿಸಿಕೊಂಡ ಶರ್ಟನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಮು. ಮಾ.1 ಎಂದು ಗುರುತಿಸಲಾಯಿತು. ಸದರಿ ಪ್ರಸ್ತುತ ಪ್ರಕರಣದಲ್ಲಿ ನಾನು ಪೋಲಿಸರ ಮುಂದೆ ನನ್ನ ಮರುಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸುತ್ತಾರೆ. 2 ನೇ ಆರೋಪಿಯನ್ನು ಸಾಕ್ಷಿಯು ಗುರುತಿಸುವುದಿಲ್ಲ.

(ಮುಂದುವರೆದ ಮುಖ್ಯ ವಿಚಾರಣೆಗೆ ಸ.ಸ.ಅ. ರವರು ಕಾಲವಕಾಶಕ್ಕೆ ಸಮಯಾವಕಾಶ ಕೋರಿದ್ದು, ಮಂಜೂರು ಮಾಡಿ, ಮುಂದುಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

Sd/-

ಸಿ/ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ, ಹರಿಹರ.